ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.5/2024**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಬಸವರಾಜ್** | | |
| **ತಂದೆಃಹೆಸರು** | **ಹನುಮಂತಪ್ಪ** | **ಪಿಡಬ್ಲೂಃ** | **07** |
| **ವಯಸ್ಸು** | **62 ವರ್ಷ** | **ಸಿಡಬ್ಲೂಃ** | **07** |
| **ಉದ್ಯೋಗಃ** | **ನಿವೃತ್ತ ಪಿ ಎಸ್ ಐ** | | |
| **ವಾಸ ಸ್ಥಳಃ** | **ಸಿಂಧನೂರು.** | | |

**ದಿನಾಂಕ 06-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ನಾನು 2016 ಜುಲೈ ನಿಂದ 2021 ಆಗಸ್ಟ್ ರವರೆಗೆ ಸಿಂಧನೂರು ನಗರ ಠಾಣೆಯಲ್ಲಿ ಎ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ19.06.2021 ರಂದು ಸಂ. 6 ಗಂಟೆಗೆ ಚಾಸಾ-1 ರವರು ನಾನು ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರಿನ ಆಧಾರದ ಮೇಲೆ ಠಾಣಾ ಮೊಕದ್ದಮೆ ಸಂಖ್ಯೆ 62/2021 ಪ್ರಕರಣವನ್ನು ಕಲಂ.448, 504, 506, 321 ಭಾ.ದಂ.ಸಂ. ಅಡಿಯಲ್ಲಿ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ. ಸಾಕ್ಷಿಯು ನಿಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು

ಗುರುತಿಸಿದ ಕಾರಣ ಪ್ರಥಮ ವರ್ತಮಾನ ವರದಿಯನ್ನು ನಿ.ಪಿ.7, ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು.

ದಿ.20-06-2021 ರಂದು ಮ. 12 ರಿಂದ 1 ಗಂಟೆಯವರೆಗೆ ಪಂಚರ ಸಮಕ್ಷಮ ನಿಪಿ-2 ರಂತೆ ಪಂಚನಾಮೆ ಮಾಡಿ, ನಿಪಿ-3 & 4 ನ್ನು ತೆಗೆದು, ಒಂದು ರಿಂಚ್ ಪ್ಯಾನರ್‌ನ್ನು ಜಪ್ತುಪಡಿಸಕೊಂಡಿರುತ್ತೇನೆ. ಸಾಕ್ಷಿಯು ನಿಪಿ-2 ರಿಂದ 4 & ಮು. ಮಾ. 1 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2 ಡಿ ಎಂದು ಗುರುತಿಸಲಾಯಿತು.

ಸಾಕ್ಷಿಯು ಮು. ಮಾ. 1 ನ್ನು ನೋಡಿ ಗುರುತಿಸಿರುತ್ತಾರೆ. ಕಲಂ.65 ಬಿ ಪ್ರ.ಪತ್ರವನ್ನು & ಸಿಡಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಸದರಿ ದಾಖಲೆಯನ್ನು ನಿಪಿ-8 & 9 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-8 ಎ & 9 ಎ ಎಂದು ಗುರುತಿಸಲಾಯಿತು. ನಂತರ ಚಾಸಾ-1, 4 & 5 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಆರೋಪಿಯ ಪತ್ತೆ ಕುರಿತು ನನ್ನ ಸಿಬ್ಬಂದಿ ಜಗಧೀಶ್ ರವರನ್ನು ನೇಮಕ ಮಾಡಿದ್ದೆ.

ದಿ.30-06-2021 ರಂದು ಆರೋಪಿ ಖುದ್ದಾಗಿ ಠಾಣೆಗೆ ಹಾಜರಾಗಿ, ನ್ಯಾಯಾಲಯದಿಂದ ಪಡೆದ ಜಾಮೀನಿನ ಪ್ರತಿಯನ್ನು ತಂದು ನನ್ನ ಮುಂದೆ ಹಾಜರುಪಡಿಸಿದ್ದು, ಆತನ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ, ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ದಿ.05-07-2021 ರಂದು ಚಾಸಾ-1 ರವರು ಬಾಡಿಗೆಗೆ ಇದ್ದ ಬಗ್ಗೆ ಘಟನಾ ಸ್ಥಳದ ಖಾತಾಉತಾರವನ್ನು ಪಡೆದಿರುತ್ತೇನೆ. ನಂತರ ಸದರಿ ದಾಖಲೆಯನ್ನು ನಗರಸಭೆಯವರಿಂದ ಖಾತಾ ಉತಾರ ಪಡೆದಿರುತ್ತೇನೆ. ಸದರಿ ದಾಖಲೆಯನ್ನು & ಖಾತಉತಾರವನ್ನು ನಿಪಿ-10 & 11 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-10 ಎ & 11 ಎ ಎಂದು ಗುರುತಿಸಲಾಯಿತು.

ದಿ.08-07-2021 ರಂದು ವೈದ್ಯಾಧಿಕಾರಿಗಳಿಂದ ಚಾಸಾ-1 ರವರ ಗಾ.ಪ್ರ.ಪತ್ರವನ್ನು ನಿಪಿ-6 ರಂತೆ ಪಡೆದಿರುತ್ತೇನೆ. ನಿಪಿ-6 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-6 ಬಿ ಎಂದು ಗುರುತಿಸಲಾಯಿತು.

ಅದೇ ದಿನ ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ದೊರೆತಿದ್ದರಿಂದ ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ**

1. ಚಾಸಾ-1 ರವರ ಮರು ಹೇಳಿಕೆಯನ್ನು ನಾನೇ ಪಡೆದಿರುತ್ತೇನೆ. ದೂರಿನಲ್ಲಿ & ಮರು ಹೇಳಿಕೆಯಲ್ಲಿ ಇರುವ ದಿನಾಂಕಗಳು ಬೇರೆ ಬೇರೆ ಎಂದರೆ ಸರಿ. ಪ್ರ. ವ. ವರದಿಯಲ್ಲಿ ದಿ.16-06-2021 ಎಂದು ನಮೂದು ಇದೆ, ದೂರಿನಲ್ಲಿ ದಿ.10-06-2021 ಎಂದು ನಮೂದು ಇದೆ ಎಂದರೆ ಸಾಕ್ಷಿಯು ಅವರು ಆ ರೀತಿ ಬರೆದಿರುತ್ತಾರೆ ಎನ್ನುತ್ತಾರೆ. ಮೊದಲು ಬಾಯಿ ಮಾತಿನಲ್ಲಿ

ಗಲಾಟೆಯಾಗಿತ್ತು ನಂತರ ಸುಮ್ಮನಾದೆ. ನಂತರ ಮೊತ್ತೊಮ್ಮೆ ಗಲಾಟೆ ಆಗಿತ್ತು ಆದ್ದರಿಂದ ದೂರು ಕೊಟ್ಟಿದ್ದೇನೆಂದು ದೂರಿನಲ್ಲಿ ನಮೂದು ಇಲ್ಲ, ಪುರವಣಿ ಹೇಳಿಕೆಯಲ್ಲಿ ಹೇಳಿರುತ್ತಾರೆ ಎಂದರೆ ಸರಿ. ದೂರಿನಲ್ಲಿ ಚಾಸಾ-1 ರವರು ತಮಗೆ ಗಾಯಗಳಾಗಿತ್ತು, ಮೂರ್ಛೆ ಬಿದ್ದಿದ್ದೆ, ಆಸ್ಪತ್ರೆಗೆ ಹೋಗಿದ್ದೆ ಎಂದು ದೂರಿನಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿಯು ಹೌದು ದೂರಿನಲ್ಲಿ ನಮೂದಿಲ್ಲ, ಆದರೆ ಪುರವಣಿ ಹೇಳಿಕೆಯಲ್ಲಿ ನಮೂದು ಇದೆ ಎನ್ನುತ್ತಾರೆ.

2. ಘಟನಾ ಸ್ಥಳದ ಚೆಕ್ ಬಂದಿ ಹೇಳುತ್ತೇನೆ. ಪೂರ್ವಕ್ಕೆ ಆದಿಶೇಷ ಗುಡಿ, ಪಶ್ಚಿಮಕ್ಕೆ ಬಂಗಾರದ ಅಂಗಡಿ, ದಕ್ಷಿಣಕ್ಕೆ ರಸ್ತೆ, ಉತ್ತರಕ್ಕೆ ದೇವಸ್ಥಾನದ ಗೋಡೆ ಇದೆ. ಘಟನಾ ಸ್ಥಳದ ಅಕ್ಕಪಕ್ಕದಲ್ಲಿ ಹಲವಾರು ಅಂಗಡಿಗಳಿವೆ ಎಂದರೆ ಸರಿ. ಸಾಮಾನ್ಯವಾಗಿ ಅಲ್ಲಿ ಜನ ಯಾವಾಗಲೂ ಇರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ.

3. ಈ ಪ್ರಕರಣದಲ್ಲಿ ಒಬ್ಬರೇ ಆರೋಪಿ ಇರುತ್ತಾರೆ. ಒಬ್ಬನೆ ಆರೋಪಿ ಇದ್ದರೆ ನಿಪಿ-10 ರಲ್ಲಿ ಇತರೆ 22 ಜನರ ವಿರುದ್ಧ ಎಂದು ಬರೆದಿರುತ್ತೀರಿ ಎಂದರೆ ಸಾಕ್ಷಿಯು ಅದರಲ್ಲಿ 22 ಜನ ಎಂದು ಬರೆದಿರುತ್ತಾರೆ ಎನ್ನುತ್ತಾರೆ.

4. ಈ ಪ್ರಕರಣದ ಆರೋಪಿಯ ಹೆಸರು ವಲೀಪಟೇಲ್. ಹಾಗಿದ್ದರೆ ಎತ್ನಾರಿ ಮೋದಿನ್ ಎಂದು ಏಕೆ ನಿಪಿ-10 ರಲ್ಲಿ ಬರೆದಿರುತ್ತೀರಿ ಎಂದರೆ ಸಾಕ್ಷಿಯು ಕಾಪೀ ಪೇಸ್ಟ್ ಆಗಿರುತ್ತದೆ ಎನ್ನುತ್ತಾರೆ.

5. ಈ ಪ್ರಕರಣದಲ್ಲಿ ದೂರುದಾರರ ಹೆಸರು ಸೈಯದ್ ವಾಹಿದ್. ಇಮ್ತಿಯಾಜ್ ಪಾಷಾ ಯಾರು ಎಂದರೆ ನನಗೆ ಗೊತ್ತಿಲ್ಲ. ನಿಪಿ-10 ರಲ್ಲಿ ಇಮ್ತಿಯಾಜ್ ಪಾಷಾ @ ಮನ್ಸೂರ್ ಅಲಿ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಕಾಪೀ ಪೇಸ್ಟ್ ಆಗಿರುತ್ತದೆ ಎನ್ನುತ್ತಾರೆ.

6. ಚಾಸಾ-1 ರವರ ಅಂಗಡಿಯ ಪಕ್ಕದಲ್ಲಿ ಹಲವಾರು ಆಭರಣದ ಅಂಗಡಿಗಳಿವೆ ಎಂದರೆ ಸರಿ. ಸಾಮಾನ್ಯವಾಗಿ ಆಭರಣದ ಅಂಗಡಿಗಳೆಂದರೆ ಸಿಸಿ ಕ್ಯಾಮೆರಾ ವ್ಯವಸ್ಥೆ ಇರುತ್ತವೆ ಎಂದರೆ ಸಾಕ್ಷಿಯು ಅವು ರಿಪೇರಿ ಇದ್ದವು ಎಂದು ಹೇಳಿದ್ದರು ಎನ್ನುತ್ತಾರೆ.

7. ನಿಪಿ-2 ರಲ್ಲಿ ಪಶ್ಚಿಮಕ್ಕೆ ನಮೂದಿಸಿರುವ ಸನಾ ಜ್ಯುವೆಲರ್ಸ್ ಅಂಗಡಿಯವರ ಹೇಳಿಕೆ ನಾನು ಪಡೆದಿಲ್ಲ. ಸಾಕ್ಷಿಗೆ ನಿಪಿ-3 ನ್ನು ತೋರಿಸಿ ಅದರಲ್ಲಿ ಕೈಯಲ್ಲಿ ಮೊಬೈಲ್ ಹಿಡಿದುಕೊಂಡು ನಿಂತಿರುವ ವ್ಯಕ್ತಿಯ ಹೆಸರು ಏನು ಎಂದರೆ ಸಾಕ್ಷಿಯು ಪರಶುರಾಮ್ ಎನ್ನುತ್ತಾರೆ. ಸದರಿಯವರು ಸನಾ ಜ್ಯುವೆಲರ್ಸ್ ಅಂಗಡಿಯ ಮಾಲೀಕ ಎಂದರೆ ಅವರ ಹೆಸರುಗಳು ಅಷ್ಟೋಂದು ನೆನಪು ಆಗುತ್ತಿಲ್ಲ ಎನ್ನುತ್ತಾರೆ.

8. ಆರೋಪಿಯ ಪತ್ತೆಗಾಗಿ ನೇಮಕ ಮಾಡಿದ ಪೋಲೀಸ್ ಜಗಧೀಶ್ ರವರ ಹೇಳಿಕೆಯನ್ನು ನಾನು ಪಡೆದಿಲ್ಲ.

9. ಘಟನಾ ಸ್ಥಳದ ಅಕ್ಕಪಕ್ಕದವರನ್ನು & ಪ್ರತ್ಯಕ್ಷ್ಯ ಸಾಕ್ಷಿದಾರರನ್ನು ಸಾಕ್ಷಿದಾರರನ್ನಾಗಿ ಮಾಡದೆ ದೂರುದಾರರಿಗೆ ಅನುಕೂಲವಾಗುವ ವ್ಯಕ್ತಿಗಳನ್ನು ಈ ಪ್ರಕರಣದ ಸಾಕ್ಷಿದಾರರನ್ನಾಗಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಅಲ್ಲಿ ಯಾರು ಇದ್ದರೋ ಅವರನ್ನು ನಾವು ತೆಗೆದುಕೊಳ್ಳುವುದು ಎನ್ನುತ್ತಾರೆ. ಸದರಿಯಾದ ಚೆಕ್ ಬಂದಿಯನ್ನು ತೋರಿಸದೆ, ದೂರುದಾರರಿಗೆ ಅನುಕೂಲ ಮಾಡಲು ಸುಳ್ಳು ಪ್ರ. ವ. ವರದಿ ದಾಖಲಿಸಿ, ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

10. ಆರೋಪಿ & ದೂರುದಾರರ ನಡುವೆ ಯಾವುದೇ ಜಗಳ ಆಗಿಲ್ಲ, ಸುಳ್ಳು ದೂರಿಗೆ ಅನುಕೂಲವಾಗುವಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**